OS No.50/2013
PW-1

**<u>ಸಾಕ್ಷಿಯನ್ನು ದಿನಾಂಕಃ 18-07-2025 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.</u>**

**<u>ಪಾಟೀಸವಾಲುಃ 2 ನೇ ಪ್ರತಿವಾದಿ ಪರ ಶ್ರೀ ಎಂ.ಎ.ಎನ್.ವಕೀಲರವರಿಂದಃ</u>**

ನಾನು ಸುಮಾರು 22 ವರ್ಷಗಳಿಂದ ದಾವಣಗೇರೆಯಲ್ಲಿ ವಾಸವಿದ್ದೇನೆ. ನೆರೆಬೊಮ್ಮನಹಳ್ಳಿಯಲ್ಲಿ ನಮಗೆ ಕಣ ಮತ್ತು ಮನೆ ಇರುವುದು. ನಮ್ಮ ಮನೆಯ ಚೆಕ್ಕು ಬಂದಿಗಳಲ್ಲಿ ಇರುವ ಮನೆಗಳಿಗೆ ನಂಬರುವನ್ನು ಕೊಟ್ಟಿರುವುದಿಲ್ಲ ನನಗೆ ದಿಕ್ಕುಗಳನ್ನು ಹೇಳಲು ಗೊತ್ತಾಗುವುದಿಲ್ಲ. ದಾವಾ ಜಮೀನಿನಲ್ಲಿ ಮೆಕ್ಕೆ ಜೋಳವನ್ನು ಬಿತ್ತಲಾಗುತ್ತದೆ. ದಾವಾ ಜಮೀನಿನ ಪಶ್ಚಿಮಕ್ಕೆ ಗುಂಡಪ್ಪನ ಜಮೀನು ಇರುತ್ತದೆ. ನನಗೆ ಗುಂಡಪ್ಪನ ಜಮೀನಿನ ಚೆಕ್ಕು ಬಂದಿ ಗೊತ್ತಿರುವುದಿಲ್ಲ. ನಾನು ದಾವಾ ಜಮೀನಿಗೆ ಕಂದಾಯನ್ನು ಕಟ್ಟಿದ್ದೇನೆ ಆ ಬಗ್ಗೆ ರಶೀದಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ಒಡ್ಡರ ಹನುಮಪ್ಪ ನನಗೆ ತಾತನಾಗಬೇಕು. ಸದರಿ ಹನುಮಪ್ಪನ ತಂದೆಯ ಹೆಸರು ಗೂರಪ್ಪ ಇರುವುದು. ಗುೂರಪ್ಪನಿಗೆ ಇಬ್ಬರು ಪತ್ನಿಯರು. ಗುೂರಪ್ಪ ಇವರಿಗೆ ಹನುಮಪ್ಪ ಒಬ್ಬತೆ ಮಗೆ ಬೇರೆ ಸಂಬಂದಿಕರು ಹನುಮಪ್ಪನಿಗೆ ಇರುವುದಿಲ್ಲ. ಹನುಮಪ್ಪನಿಗೆ ಇಬ್ಬರು ಮಕ್ಕಳು ಅವರೆಂದಗೆ ನನ್ನ ತಾಯಿ ಹಾಗೂ ನನ್ನ ದೊಡ್ಡಮ್ಮ ನಾದ ದುರುಗಮ್ಮ @ ಹುಲಿಗೆಮ್ಮ. ನನ್ನ ದೊಡ್ಡಮ್ಮನಿಗೆ ಮಕ್ಕಳು ಇರುವುದಿಲ್ಲ. ದುರುಗಮ್ಮ ಮತ್ತು ಹುಲಿಗೆಮ್ಮ ಇಬ್ಬರೂ ಒಂದೇ ವ್ಯಕ್ತಿಗಳು ಆಗಿರುವರು ಆಕೆಯನ್ನು ತವರು ಮನೆಯಲ್ಲಿ ಹುಲಿಗೆಮ್ಮ ಎಂದು ಗಂಡ ಮನೆಯಲ್ಲಿ ದುರುಗಮ್ಮ ಎಂದು ಕರೆಯುವರು.

ಆಕೆಗೆ ಮದುವೆ ಆಗಿತ್ತು ಆಕೆಯನ್ನು ಯಾವ ಊರಿಗೆ ವಿವಾಹ ಮಾಡಿ ಕೊಡಲಾಗಿತ್ತು ನನಗೆ ಗೊತ್ತಿಲ್ಲ. ಆಕೆಯ ಗಂಡನ ಹೆಸರು ನನಗೆ ಸರಿಯಾಗಿ ಗೊತ್ತಿಲ್ಲ, ಚೌಡಪ್ಪ ಎಂದು ಹೇಳುತ್ತಿದ್ದರು. ದುರುಗಮ್ಮ @ ಹುಲಿಗೆಮ್ಮಳಿಗೆ ನಿಗೆ ಮಂಜಮ್ಮ, ಪ್ರೇಮಕ್ಕ ಮತ್ತು ಸಿದ್ದಮ್ಮ ಎಂಬ ಮಕ್ಕಳು ಇದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ದುರುಗಮ್ಮ @ ಹುಲಿಗೆಮ್ಮ 24 ವರ್ಷಗಳ ಹಿಂದೆ ತೀರಿಕೊಂಡಿರುವರು. ಆಕೆ ನೆರೆಬೊಮ್ಮಹಳ್ಳಿಯಲ್ಲಿ ಮೃತ ಪಟ್ಟಿರುವರು. ಆಕೆಯ ಗಂಡ ಎಲ್ಲಿ ಮೃತ ಪಟ್ಟರು ಎಂದು ನನಗೆ ಗೊತ್ತಿಲ್ಲ. ಆಗ ನಾನು ಸಣ್ಣವನಿದ್ದೆನು.

ಸದರಿ ದುರುಗಮ್ಮ @ ಹುಲಿಗೆಮ್ಮ ತಮ್ಮ ಜೀವಿತ ಅವದಿಯಲ್ಲಿ ನಮ್ಮೊಂದಿಗೆ ಇದ್ದರು ಬೇರೆ ಆಗಿರುವುದಿಲ್ಲ. ಹೊಸೂರಮ್ಮ ಮತ್ತು ಸದರಿ ದುರುಗಮ್ಮ @ ಹುಲಿಗೆಮ್ಮ ನಡುವೆ ಯಾವುದೇ ಪಾಲು ವಿಭಾಗ ಆಗಿರುವುದಿಲ್ಲ. ವಸೂರಮ್ಮ ಬದುಕಿದ್ದರೆ ದಾವಾ ಜಮೀನಿನಲ್ಲಿ ಆಕೆಗೆ ಹಕ್ಕು ಬರುತ್ತಿತು. ಅದೇ ರೀತಿ ದುರುಗಮ್ಮ @ ಹುಲಿಗೆಮ್ಮಳಿಗೆ ಮಕ್ಕಳಿದ್ದರೆ ಅವರಿಗೂ ದಾವಾ ಜಮೀನಿನಲ್ಲಿ ಹಕ್ಕು ಬರುತ್ತದೆ ಅಂದರೆ ಸರಿ. ನನ್ನ ತಾತ ಹನುಮಪ್ಪನವರು 5 ಜನ ಒಡಹುಟ್ಟಿದವರು ಅಂದರೆ ಸರಿಯಲ್ಲ ಆತ ಒಬ್ಬನೇ ಇದ್ದರು. ಸಣ್ಣ ಹನುಮಪ್ಪ, ದಾನಪ್ಪ, ಈರಪ್ಪ, ಯಂಕಮ್ಮ ಮತ್ತು ಹನುಮಂತಪ್ಪ ಇವರೆಲ್ಲರೂ ಗೂರಪ್ಪನ ಮಕ್ಕಳು ಅಂದರೆ ಸರಿಯಲ್ಲ.

2 ನೇ ಪ್ರತಿವಾದಿ ಪಿ. ಬಸವರಾಜ ನನಗೆ ಪರಿಚಯ ಇರುವನು. ನನಗೆ ಮೃತ 1 ನೇ ಪ್ರತಿವಾದಿಯ ಪರಿಚಯ ಇರುವುದು. ದಾವಾ ಜಮೀನು ಮೃತ 1 ನೇ ಪ್ರತಿವಾದಿ ಪೂರ್ವಜರ ಜಮೀನು ಅಂದರೆ ಸರಿಯಲ್ಲ. ದಾವಾ ಜಮೀನು ಯಾವಾಗಲೂ ಆಕೆಯ ಪೂರ್ವಜರ ಮತ್ತು ಜಯಮ್ಮನ ಸ್ವಾಧೀನದಲ್ಲತ್ತು ಅಂದರೆ ಸರಿಯಲ್ಲ. ಜಯಮ್ಮ ಮತ್ತು ಆಕೆಯ ಗಂಡ ದಾಸಪ್ಪ 2 ನೇ ಪ್ರತಿವಾದಿಗೆ ದಾವಾ ಜಮೀನನ್ನು ನೊಂದಾಯಿತ ಖರೀದಿ ಪತ್ರದ ಮೂಲಕ ದಿನಾಂಕ 18.02.2012 ರಂದು ಖರೀದಿಗೆ ನೀಡಿದ್ದರು ಅಂದರೆ ಸರಿ. ಆದರೆ ಅದು ನಮ್ಮ ಹೊಲ ಆಗಿರುವುದು.

ಆ ಖರೀದಿ ಪತ್ರದ ವಿಚಾರ ನನಗೆ 2010-11 ರಲ್ಲಿ ಗೊತ್ತಾಗಿರುತ್ತದೆ. ಸದರಿ ಖರೀದಿ ಪತ್ರವನ್ನು ಪ್ರಶ್ನಿಸಿ ಎಸಿ ನ್ಯಾಯಾಲಯಕ್ಕೆ ಕೇಸು ಹಾಕಿದ್ದೆವು. ಆ ಕೇಸು ಏನಾಯಿತು ಎಂದು ನನಗೆ ಗೊತ್ತಿಲ್ಲ. ದಾವಾ ಜಮೀನಿನ ಪಹಣಿ 2 ನೇ ಪ್ರತಿವಾದಿ ಹೆಸರಿಗೆ ಇರುವುದು. ಖರೀದಿ ಆದ ನಂತರವೂ ಆತನ ಹೆಸರು ಇರುತ್ತದೆ. ದಾವಾ ಜಮಿನಿಗೆ 2 ನೇ ಪ್ರತಿವಾದಿ ಕಂದಾಯ ಕಟ್ಟುತ್ತಿರುವನು ಅಂದರೆ ಸರಿಯಲ್ಲ. ನಮಗೆ ದಾವಾ ಸ್ವತ್ತಿನಲ್ಲ ಯಾವುದೇ ಹಕ್ಕು ಅಧಿಕಾರ ಇರುವುದಿಲ್ಲ ಅಂದರೆ ಸರಿಯಲ್ಲ. ಹನಮಪ್ಪನಿಗೆ ನಾವು ಮಾತ್ರ ವಾರಸುದಾರರು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

ದಾವಾ ಜಮೀನಿನು ನಮಗಾಗಲೀ ಹನುಮಪ್ಪನಿಗೆ ಯಾವುದೇ ಸಂಬಂದ ಇರುವುದಿಲ್ಲ ಅಂದರೆ ಸರಿಯಲ್ಲ. ದಾವಾ ಜಮೀನು ಯಾವತ್ತೂ ನಮ್ಮ ಸವಧೀನದಲ್ಲಿ

ಇರಲಿಲ್ಲ ಮತ್ತು ಇರರುವುದಿಲ್ಲ ಅಂದರೆ ಸರಿಯಲ್ಲ. ಪ್ರತಿವಾದಿಗೆ ತೊಂದರೆ ಕೊಡಲು ಸುಳ್ಳು ಸಾಕ್ಷಿ ಹೇಳುತ್ತಿದೇಃನೆ ಅಂದರೆ ಸರಿಯಲ್ಲ. ಖರೀದಿ ನೆಲೆಯಲ್ಲಿ ಬಸವರಾಜಪ್ಪನೇ ತಡೆಯಾಜ್ಞೆ ಆಗುವರೆಗೆ ಸ್ವಾಧೀನದಲ್ಲಿರುವನು ಅಂದರೆ ಸರಿಯಲ್ಲ. ಈಗ ಆ ಜಮೀನು ಬೀಳು ಬಿದ್ದಿದೆ ಅಂದರೆ ಸರಿಯಲ್ಲ. ನನ್ನ ತಾಯಿ ಒಂದು ವರ್ಷದ ಹಿಂದೆ ಮೃತ ಪಟ್ಟರು.

ಸೆಟೆಲ್ ಮೆಂಟ್ ರಿಜಿಸ್ಟರ್ ಯಾರ ಹೆಸರಿಗೆ ಇದು ಎಂದು ನನಗೆ ಗೊತ್ತಿಲ್ಲ. ಹನುಮಪ್ಪನಿಂದ ನೇರವಾಗಿ ಜಯಮ್ಮನ ಹೆಸರಿಗೆ ದಾವಾ ಅಸ್ತಿ ಬಂದಿದೆ ಅಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸರಿಯಿದೆ.**

18-07-2025

**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ಹರಪನಹಳ್ಳಿ**